ಮಳೆ... ಎಲ್ಲೆಲ್ಲಿ ನೋಡಿದರೂ ನೀರೋ ನೀರು. ಮನೆಯೆದುರಿನ ಅಂಗಳ ಸಣ್ಣ ಹರಿವಿರುವ ಕೊಳದಂತಾಗಿಬಿಟ್ಟಿತ್ತು. ಕೆಂಪು ಹಳದಿ ನೆಲದ ಸಂಗದಿಂದ ಮಳೆ ನೀರೂ ಸಹಾ ಕೆಂಪು ಮಿಶ್ರಿತ ಹಳದಿಯಾಗಿ ಕಾಣುತ್ತಿತ್ತು. ಅಂಗಳದ ಮಧ್ಯೆ ಮಧ್ಯೆ ನೀರಿನಿಂದಾಚೆ ತಲೆಹಾಕಿ ನಿಂತಿರುವ ಹುಲ್ಲುಗಳು ಅಣೆಕಟ್ಟಿನ ಹಿನ್ನೀರಿನಲ್ಲಿ ಮುಳುಗಡೆಯಾದ ಕಾಡಿನಂತೆ ಗೋಚರಿಸುತ್ತಿದ್ದವು. ಎದುರುಗಡೆ ಗುಡ್ಡವನ್ನೆಲ್ಲ ಬಳಿದುಕೊಂಡು ಬಂದ ನೀರು ಸಣ್ಣದೊಂದು ಕಾಲುವೆಯ ಮೂಲಕ ಇಪ್ಪತ್ತಡಿ ಆಳದ ಕಣಿಗೆ ಧುಮುಕುತ್ತಾ ಚಿಕ್ಕ ಜಲಪಾತವೊಂದು ರಚನೆಯಾಗಿತ್ತು. ಸುರಿದ ಮಳೆಗೆ ಮತ್ತಷ್ಟು ಹಸಿರಾದ ಗುಡ್ಡದ ಮರಗಳು 'ಬರ್ಸೋರೇ ಮೇಘಾ ಮೇಘಾ...' ಎಂದು ಒಳಗೊಳಗೇ ಹಾಡಿಕೊಳ್ಳುತ್ತಿರುವಂತೆ ತಲೆಯಾಡಿಸುತ್ತಾ ನಿಂತಿದ್ದವು. ಹಿತ್ತಲಿನ ಯಾವ್ಯಾವುದೋ ಮೂಲೆಗಳಿಂದ ಸಣ್ಣ ಸಾಲುಗಳಂತೆ ಹರಿದುಬಂದ ನೀರೆಲ್ಲಾ ಅಂಗಳದಲ್ಲಿ ಗುಂಪುಗೂಡಿ ತಗ್ಗಿನತ್ತ ಹರಿದುಹೋಗುತ್ತಿತ್ತು. ಹಂಚುಮಾಡಿನಿಂದ ಟಪಟಪ ಉದುರುತ್ತಿರುವ ಹನಿಗಳು ನಿಂತ ನೀರಿನಲ್ಲಿ ಅಲೆಯ ಬಳೆಗಳನ್ನು ಮೂಡಿಸುತ್ತಿದ್ದವು.

ಶೀಟು ಹೊದಿಸಿದ ಛಾವಣಿಯ ಕೆಳಗಿನ ಕುರ್ಚಿಯಲ್ಲಿ ಪ್ರತಿಮೆಯಂತೆ ಕುಳಿತು ಪ್ರಕೃತಿಯ

